**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಒಎಸ್ 263/2022**

**ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿನಾಂಕ 22.03.2024 ರಂದು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಎ.ಪಿ.ಪಿ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

ನಾನು ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನಾನು 10 ವರ್ಷಗಳಿಂದ ಕೆ.ಆರ್.ನಗರದಲ್ಲಿ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಮೂಲತಃ ಹುಣಸೂರಿನವರು ಎಂದರೆ ಸರಿ. ಪ್ರತಿವಾದಿ ನನಗೆ ಸುಮಾರು 5-6 ವರ್ಷಗಳಿಂದ ಪರಿಚಯ. ಅವರು ನನ್ನ ಸಂಬಂಧಿಕರಲ್ಲ ಪರಿಚಯಸ್ಥರಷ್ಟೆ. ಪ್ರತಿವಾದಿ ಉದ್ಯೋಗದ ಬಗ್ಗೆ ನನಗೆ ಗೊತ್ತಿಲ್ಲ. ಅವರು ಹಂಪಾಪುರ ಗ್ರಾಮದವರು ಎಂದರೆ ಸರಿ. ಪ್ರತಿವಾದಿ ನನಗೆ ನಿಪಿ 1 ರ ಸಾಕ್ಷಿದಾರರಾದ ಡಿ.ಎಸ್.ದಿನೇಶರವರಿಂದ ಪರಿಚಯ. ಸದರಿ ದಿನೇಶರವರು ಮೂಲತಃ ದೊಡ್ಡವಡ್ಡರಗುಡಿ ಗ್ರಾಮದವರು ಎಂದರೆ ಸರಿ. ಅವರು ನಮ್ಮ ಇಲಾಖೆಯಲ್ಲಿ ಪರವಾನಿಗೆ ಭೂ ಮಾಪಕರಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಅವರು ಜೊತೆಯಲ್ಲೇ ಕೆಲಸ ಮಾಡುತ್ತೇವೆ.

2. ಪ್ರತಿವಾದಿ ದಿನೇಶರವರ ಮೂಲಕ ನನ್ನನ್ನು ನೇರವಾಗಿ ಬಂದು ಹಿಂದಿನ ಸಾಲ ತೀರಿಸಲು ಹಾಗೂ ಮನೆ ಕಟ್ಟಲು ಹಣದ ಅವಶ್ಯಕತೆ ಇದೆ ಅದಕ್ಕೆ ಹಣ ಬೇಕು ಎಂದು ನನ್ನ ಮನೆಯ ಹತ್ತಿರ ಬಂದು ಕೇಳಿದರು. ಪ್ರತಿವಾದಿ ನನ್ನನ್ನು 15 ದಿನದ ಹಿಂದೆಯೇ ನನ್ನನ್ನು ಹಣ ಕೇಳಿದರು. ದಿಃ 20.03.2020 ರಂದು ಪ್ರತಿವಾದಿಗೆ ಹಣ ನೀಡಿದ್ದೆ. ಈಗ ನಾನು ಪ್ರಸ್ತುತ ಕೆ.ಆರ್.ನಗರದಲ್ಲಿ ವಾಸವಿದ್ದೇನೆ. ಹಣ ಕೇಳಿದ ನಂತರ ನಾನು ಸಮಯ ತೆಗೆದುಕೊಂಡು ಪ್ರತಿವಾದಿಗೆ ಹಣ ನೀಡಿರುತ್ತೇನೆ. ಹಣವನ್ನು ತಾಲ್ಲೂಕು ಕಚೇರಿ ಬಳಿ ಪ್ರೊನೋಟ್ ಪೇಪರ್ ಬರೆಸುವ ಜಾಗದಲ್ಲಿ ನೀಡಿರುತ್ತೇನೆ. ಪ್ರೊನೋಟ್ ಪೇಪರ್ ನ್ನು ಪ್ರತಿವಾದಿಯೇ ತಂದಿರುತ್ತಾರೆ.

3. 1 ಲಕ್ಷ ಹಣವನ್ನು ನಾನು ಬ್ಯಾಂಕಿನಿಂದ ಡ್ರಾ ಮಾಡಿ ಆ ದಿನ ತಂದಿಲ್ಲ, ನನ್ನ ಬಳಿ 60 ಸಾವಿರ ನಗದು ಇತ್ತು, ಉಳಿದ ಹಣವನ್ನು ನನ್ನ ಸ್ನೇಹಿತರಿಂದ ಪಡೆದು ಪ್ರತಿವಾದಿಗೆ

ನೀಡಿರುತ್ತೇನೆ. ಆ ದಿನ ನನ್ನ ಬಳಿ 1 ಲಕ್ಷ ಹಣ ಇಲ್ಲದಿದ್ದರೂ ಪ್ರತಿವಾದಿಯ ಮೇಲಿದ್ದ ವಿಶ್ವಾಸದಿಂದ ಬೇರೆಯವರಿಂದ ಹಣವನ್ನು ಪಡೆದು ನನ್ನ ಹಣವನ್ನು ಸೇರಿಸಿ ಪ್ರತಿವಾದಿಗೆ ನೀಡಿರುತ್ತೇನೆ. ಪ್ರತಿವಾದಿಯು 2-3 ತಿಂಗಳೊಳಗಾಗಿ ಹಣವನ್ನು ಮರುಪಾವತಿ ಮಾಡುತ್ತೇನೆ, ಇಲ್ಲವಾದಲ್ಲಿ 2% ಬಡ್ಡಿಯನ್ನು ಸೇರಿಸಿ ನೀಡುತ್ತೇನೆ ಎಂದು ಹೇಳಿದ. ಈ ವಿಚಾರವನ್ನು ನಾನು ನಿಪಿ 1 ರಲ್ಲಿ ಬರೆಸಿಲ್ಲ. ಈ ರೀತಿ ನಿಪಿ 1 ರಲ್ಲಿ ಬರೆಸಲು ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯ ಮೇಲಿದ್ದ ವಿಶ್ವಾಸದಿಂದ ಬರೆಸಿಲ್ಲ ಎಂದು ನುಡಿಯುತ್ತಾರೆ.

4. ವ್ಯವಹಾರ ನಡೆದ ಸಮಯ ನಿಖರವಾಗಿ ಹೇಳಲಾಗುವುದಿಲ್ಲ. ವ್ಯವಹಾರ ನಡೆದ ಸಮಯದಲ್ಲಿ ನಾನು, ಪ್ರತಿವಾದಿ ಮತ್ತು ಇಬ್ಬರು ಸಾಕ್ಷಿದಾರರು ಹಾಗೂ ಪತ್ರ ಬರಹಗಾರರು ಇದ್ದೇವು. ದಿಃ 20.03.2020 ರ ಸಮಯದಲ್ಲಿ ಕೋವಿಡ್ ಎಮರ್ಜನೆನ್ಸಿ ಜಾರಿಯಲ್ಲಿತ್ತು ಎಂದರೆ ಸರಿ. ಮತ್ತೊರ್ವ ಸಾಕ್ಷಿದಾರರ ಹೆಸರು ರಾಚಯ್ಯ. ಪ್ರತಿವಾದಿ ಹಣ ಪಡೆಯುವಾಗ ನಿಪಿ 1 ಕ್ಕೆ ಸಹಿ ಹಾಕಿರುತ್ತಾರೆ. ಅವರು 2 ಕಡೆ ಸಹಿ ಮಾಡಿರುತ್ತಾರೆ. ಪತ್ರ ಬರಹಗಾರರು ಒಂದು ಕಡೆ ಸಹಿ ಮಾಡಿರುತ್ತಾರೆ. ಸಾಕ್ಷಿದಾರರು 2 ಕಡೆ ಸಹಿ ಮಾಡಿರುತ್ತಾರೆ. ಪ್ರತಿವಾದಿ ಕನ್ನಡ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ.

5. ಹಣ ನೀಡಿ 3 ತಿಂಗಳಾದ ನಂತರ ಹಣ ವಾಪಸ್ಸು ನೀಡುವಂತೆ ನಾನು ಪ್ರತಿವಾದಿ ಬಳಿ ಬೇಡಿಕೆ ಇಟ್ಟಿದ್ದೆ. ಆ ಸಮಯದಲ್ಲಿ ನಾನು ಪ್ರತಿವಾದಿಗೆ ನೋಟಿಸ್ ನೀಡಿಲ್ಲ. ದಿಃ 22.02.2022 ರಂದು ನಾನು ಪ್ರತಿವಾದಿಗೆ ನೋಟಿಸ್ ನೀಡಿರುತ್ತೇನೆ. ನಿಪಿ 1 ರಲ್ಲಿ ಕಾಣುವ ಮೊತ್ತವನ್ನು ನಾನು ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಹಾಗೂ ಪ್ರತಿವಾದಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಕರ್ತವ್ಯದಲ್ಲಿ ನಿರತನಾಗಿದ್ದು ಮೇಲೆ ಹೇಳಿದ ಹಣಕಾಸಿನ ವ್ಯವಹಾರದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ.

6. ದಿಃ 20.03.2020 ರಂದು ನಾನು ಸರ್ಕಾರಿ ಕೆಲಸದಲ್ಲಿ ಫಿಲ್ಡ ವರ್ಕ್ ನಲ್ಲಿದ್ದೆ ಎಂದರೆ ಸರಿ. ಆ ದಿನ ಸಾಕ್ಷಿದಾರರಾದ ದಿನೇಶ ರವರು ಫಿಲ್ಡ ವರ್ಕ್ ನಲ್ಲಿ ತೊಡಗಿದ್ದರು ಎಂದರೆ ಸರಿ. ಸಾಕ್ಷಿದಾರರಾದ ರಾಚಯ್ಯರವರು ಕೃಷಿಕರು. ಅವರ ಊರು ಚಂದಗಾಲು ಗ್ರಾಮ. ಪ್ರತಿವಾದಿಯಿಂದ ನಾನು ಖಾಲಿ ಪತ್ರಕ್ಕೆ ರುಜು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಹೆಚ್ಚಿನ ಲಾಭಕ್ಕಾಗಿ ಈ ದಾವೆಯಲ್ಲಿ ಹೂಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ

ಸಾಕ್ಷಿದಾರರೆಲ್ಲ ನನ್ನ ಉದ್ಯೋಗದ ಸಹಪಾಠಿಗಳಾಗಿದ್ದು ಈ ದಾವೆಗೆ ಅನುಕೂಲವಾಗಲಿ ಎಂದು ಸಾಕ್ಷಿದಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಗ್ರಾಮದ ಯಾವ ಸಾಕ್ಷಿದಾರರು ಇಲ್ಲ ಎಂದರೆ ಸರಿ. ನನ್ನ ಹಾಗೂ ಪ್ರತಿವಾದಿ ನಡುವೆ ಯಾವುದೇ ಹಣಕಾಸು ವ್ಯವಹಾರ ನಡೆಯದೇ ಇದ್ದರೂ ಸಹ ನಾನು ಮತ್ತು ಸಾಕ್ಷಿದಾರರು ಹಾಗೂ ಪತ್ರ ಬರಹಗಾರರು ದಾಖಲೆಗಳನ್ನು ಸೃಷ್ಟಿಸಿಕೊಂಡು ಅವರ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಕೂಲಿ ಕೆಲಸ ಮಾಡುತ್ತಿದ್ದು ಅವರು ನನ್ನ ಬಳಿ ಇಷ್ಟು ದೊಡ್ಡ ಮೊತ್ತವನ್ನು ಪಡಯುವ ಅವಶ್ಯಕತೆ ಇಲ್ಲ ಹಾಗೂ ನಾನು ಅವರಿಗೆ ಇಷ್ಟು ದೊಡ್ಡ ಮೊತ್ತವನ್ನು ಕೊಡುವ ಆಸಕ್ತಿ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ